## ‘ಹರ್ಬಲ್’ ಔಷಧವೂ ಅಪಾಯ!



ಗಿಡಮೂಲಿಕೆ ಔಷಧಗಳಿಂದ ಅಡ್ಡ ಪರಿಣಾಮ ಇಲ್ಲ ಎಂದು ದೊಡ್ಡಮಟ್ಟದ ಪ್ರಚಾರಾಂದೋಲನ ಮಾಡಲಾಗುತ್ತಿದೆ. ಆದರೆ ಗಿಡಮೂಲಿಕೆ ಮದ್ದನ್ನು ಅತಿಯಾಗಿ ಬಳಸುವುದರಿಂದ ಮೂತ್ರಪಿಂಡ ವೈಫಲ್ಯ, ಇಲ್ಲವೆ ಮೂತ್ರಕೋಶ ಕ್ಯಾನ್ಸರ್ ಬರುವ ಸಾಧ್ಯತೆ ಹೆಚ್ಚಿದೆ ಎಂದು ಇತ್ತೀಚಿನ ಸಂಶೋಧನೆ ಹೇಳಿದೆ.

ಗಿಡಮೂಲಿಕೆ ಔಷಧಗಳು ಕೂಡ ಆರೋಗ್ಯದ ಮೇಲೆ ತೊಂದರೆಯನ್ನು ಉಂಟುಮಾಡುತ್ತವೆ ಎನ್ನುವ ಬಗ್ಗೆ ತಮ್ಮಲ್ಲಿ ಸೂಕ್ತ ಆಧಾರಗಳಿವೆ ಎಂದು ಸಂಶೋಧಕರು ಹೇಳಿದ್ದಾರೆ. ತುಂಬಾ ದೀರ್ಘಕಾಲದಿಂದಲೂ ಭಾರತದಲ್ಲಿ ಅಪಾರ ಪ್ರಮಾಣದಲ್ಲಿ ಗಿಡಮೂಲಿಕೆಯ ಮದ್ದನ್ನು ಬಳಸಲಾಗುತ್ತಿದೆ.

ದೇಹವನ್ನು ತೆಳ್ಳಗೆ ಮಾಡಲು, ಅಸ್ತಮಾ ಹಾಗೂ ಸಂಧಿವಾತಕ್ಕೆ ಸೇರಿದಂತೆ ಅನೇಕ ಸಮಸ್ಯೆಗಳಿಗೆ ಸಾಮಾನ್ಯವಾಗಿ ‘ಹರ್ಬಲ್’ ಔಷಧ ಶಾಸ್ತ್ರದ ಪ್ರಕಾರ ‘ಅರಿಸ್ಟೊಲೊಚಿಕ್ ಆಸಿಡ್’ ಇರುವ ಸಸ್ಯ ಜನ್ಯ ಮದ್ದನ್ನು ನೀಡಲಾಗುತ್ತದೆ. ಈ ರೀತಿಯ ‘ಆಸಿಡ್’ ಕಿಡ್ನಿಗೆ ಹಾನಿಯನ್ನು ಉಂಟು ಮಾಡುತ್ತದೆ. ಈ ಕಾರಣಕ್ಕೆ ಕೆಲವು ರಾಷ್ಟ್ರಗಳಲ್ಲಿ ಈ ರೀತಿಯ ಗಿಡಮೂಲಿಕೆ ಬಳಕೆಯನ್ನೂ ನಿಷೇಧಿಸಲಾಗಿದೆ ಎಂದು ಸಂಶೋಧಕರು ಹೇಳಿದ್ದಾರೆ.

## ಉಸಿರಿಂದ ಆಯಾಸ ಪತ್ತೆಹಚ್ಚಬಹುದು!

ಉಸಿರಾಟದ ಏರಿಳಿತದಲ್ಲಿಯೇ ಮನುಷ್ಯರ ಆಯಾಸವನ್ನು ಅಳೆಯಬಹುದು ಎಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.

ಮನುಷ್ಯನ ದೇಹದ ಬಳಲಿಕೆಯನ್ನು ಪತ್ತೆಹಚ್ಚುವ ತಂತ್ರಜ್ಞಾನವನ್ನು ರೂಪಿಸಿರುವ ಸಂಶೋಧಕರು ಅಳತೆಯ ಮಾಪಕದಲ್ಲಿ ಆರು ಹಂತಗಳನ್ನು ಗುರುತಿಸಿದ್ದಾರೆ. ಅದರ ಆಧಾರದ ಮೇಲೆ ವ್ಯಕ್ತಿಯ ಆಯಾಸವನ್ನು ಗುರುತಿಸಬಹುದು ಎಂದು ಹೇಳಿದ್ದಾರೆ.

ಸಂಶೋಧಕರು ಅಧ್ಯಯನಕ್ಕೆ 22 ಯುವಕರನ್ನು ಆಯ್ಕೆ ಮಾಡಿಕೊಂಡಿದ್ದರು. ಅದರಲ್ಲಿ ದಣಿದ, ಒತ್ತಡದಲ್ಲಿರುವ ಹಾಗೂ ಸಮಾಧಾನದಿಂದಿರುವ ವ್ಯಕ್ತಿಗಳೂ ಸೇರಿದ್ದರು. ಆದರೆ ಉದ್ದೇಶಿತ ಫಲಿತಾಂಶ ತಮ್ಮ ಅಧ್ಯಯನದಲ್ಲಿ ಸಿಕ್ಕಿದೆ ಎಂಬ ಅಭಿಪ್ರಾಯವನ್ನು ಸಂಶೋಧಕರು ನೀಡಿದ್ದಾರೆ.

## ಮಕ್ಕಳ ತಿಂಡಿ ಬಗ್ಗೆ ಇರಲಿ ಎಚ್ಚರ

ಮಕ್ಕಳಿಗೆಂದು ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಬಹುತೇಕ ತಿಂಡಿಗಳಲ್ಲಿ ಸೋಡಿಯಂ (ಉಪ್ಪಿನಂಶ) ಹೆಚ್ಚಿದ್ದು, ದೀರ್ಘಕಾಲದಲ್ಲಿ ಆರೋಗ್ಯಕ್ಕೆ ಹಾನಿ ಉಂಟಾಗುತ್ತದೆ. ಈ ಬಗ್ಗೆ ಪೋಷಕರಲ್ಲಿ ಎಚ್ಚರಿಕೆ ಇರಲಿ ಎಂದು ಅಮೆರಿಕಾದ ಸಂಶೋಧಕರು ಹೇಳಿದ್ದಾರೆ.

ಮಾರುಕಟ್ಟೆಯಲ್ಲಿ ಲಭ್ಯವಿರುವ ಮಕ್ಕಳ ತಿಂಡಿ ಹಾಗೂ ಸ್ನ್ಯಾಕ್ಸ್‌ಗಳಲ್ಲಿ ಪ್ರತಿಶತ 75ರಷ್ಟು ಉತ್ಪನ್ನಗಳಲ್ಲಿ ಸೋಡಿಯಂ ಪ್ರಮಾಣ ಅಗತ್ಯಕ್ಕಿಂತ ಹೆಚ್ಚಿದೆ.

ಇದನ್ನು ತಿನ್ನುವುದರಿಂದ ಮಕ್ಕಳು ದೊಡ್ಡವರಾದ ಮೇಲೆ ಅಧಿಕ ರಕ್ತದ ಒತ್ತಡ ಹಾಗೂ ಬಹುಬೇಗನೇ ವಯಸ್ಸಾದವರಂತೆ ಕಾಣುತ್ತಾರೆ ಎಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ. ಹಿರಿಯರು ತಮ್ಮ ಮಕ್ಕಳಿಗೆ ಇಂತಹ ಕುರುಕಲು ತಿಂಡಿ ನೀಡುವಾಗ ಎಚ್ಚರವಹಿಸಬೇಕು ಎಂಬ ಸಲಹೆಯನ್ನು ಅವರು ನೀಡಿದ್ದಾರೆ.

## ಮಲೇರಿಯಾಕ್ಕೆ ಬಂದಿದೆ ಮದ್ದು!

ಮಲೇರಿಯಾ ರೋಗವನ್ನು ಪರಿಣಾಮಕಾರಿಯಾಗಿ ಗುಣಪಡಿಸಲು ಹೊಸ ಔಷಧವನ್ನು ಅಮೆರಿಕಾದ ಸಂಶೋಧಕರು ಕಂಡುಹಿಡಿದಿದ್ದಾರೆ.

ಈ ಔಷಧದ ಬಳಕೆಯಿಂದ ರೋಗ ಗುಣಮುಖವಾಗುವ ಜೊತೆಗೆ ರೋಗಕ್ಕೆ ಕಾರಣವಾಗುವ ವೈರಸ್ ಹರಡದಂತೆ ಕಾಪಾಡುತ್ತದೆ ಎಂದು ಸಂಶೋಧಕರ ತಂಡ ಅಭಿಪ್ರಾಯಪಟ್ಟಿದೆ.

ಅಂತರರಾಷ್ಟ್ರೀಯ ಸಂಶೋಧಕರ ತಂಡ ಈ ನಿಟ್ಟಿನಲ್ಲಿ ಅಧ್ಯಯನ ನಡೆಸಿತ್ತು. ತಾವು ನಡೆಸಿದ ಪರೀಕ್ಷೆಯಲ್ಲಿ ಔಷಧ ಯಶಸ್ವಿಯಾಗಿದೆ. ಇದನ್ನು ಚಿಕಿತ್ಸಾಲಯ ಪ್ರಯೋಗಕ್ಕೆ ಕಳುಹಿಸಲಾಗಿದೆ. ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಇದು ತುಂಬ ಪ್ರಯೋಜನವಾಗುತ್ತದೆ ಎಂದು ಆ ತಂಡ ಹೇಳಿದೆ.

ಮೂರು ಹಂತಗಳಲ್ಲಿ ವೈರಸ್ ಅನ್ನು ಕೊಲ್ಲುವ ಸಾಮರ್ಥ್ಯವನ್ನು ಈ ಔಷಧ ಹೊಂದಿದೆ. ಇದು ರೋಗಿಯನ್ನು ಗುಣಪಡಿಸುವ ಜೊತೆಗೆ, ರೋಗ ಹರಡದಂತೆ ನೋಡಿಕೊಳ್ಳುತ್ತದೆ. ವೈರಸಸ್ ಅನ್ನು ಸಂಪೂರ್ಣ ನಿರ್ಮೂಲನೆ ಮಾಡುತ್ತದೆ ಎಂಬ ಅಭಿಮತವನ್ನು ಸಂಶೋಧಕರು ವ್ಯಕ್ತಪಡಿಸಿದ್ದಾರೆ.

## ಬೀಪಿ ಹೆಚ್ಚಿಸುವ ಪೇಯ!

ಶಕ್ತಿವರ್ಧಕ ಪೇಯಗಳನ್ನು ಹೆಚ್ಚಾಗಿ ಕುಡಿಯುವುದರಿಂದ ಅಧಿಕ ರಕ್ತದೊತ್ತಡ ಹಾಗೂ ಹೃದಯಕ್ಕೆ ತೊಂದರೆ ಉಂಟಾಗುತ್ತದೆ ಎಂದು ಭಾರತೀಯ ಮೂಲದ ಸಂಶೋಧಕರು ಎಚ್ಚರಿಕೆ ನೀಡಿದ್ದಾರೆ.

ಶಕ್ತಿವರ್ಧಕ ಪೇಯ ಸೇವಿಸುವುದರಿಂದ ಹೃದಯ ಬಡಿತದ ಲಯದಲ್ಲಿ ಏರುಪೇರಾಗುತ್ತದೆ. ಒಂದೇ ಸಮಯಕ್ಕೆ ಮೂರು ಕ್ಯಾನ್ ತಂಪು ಪಾನೀಯ ಕುಡಿದರೆ ಅದು ಹೃದಯ ಬಡಿತವನ್ನು ನಿಲ್ಲಿಸಬಹುದು ಎಂಬ ಆತಂಕದ ವಿಷಯವನ್ನು ಸಂಶೋಧಕರು ಹೇಳಿದ್ದಾರೆ.

ರಕ್ತದೊತ್ತಡದಲ್ಲಿಯೂ ಏರುಪೇರಾಗುವುದು ಕಂಡು ಬಂದಿದೆ. ಆದರೆ, ಈ ಬಗ್ಗೆ ಹೆಚ್ಚಿನ ಅಧ್ಯಯನ ನಡೆಸುವುದು ಅವಶ್ಯ ಎಂಬ ಆಶಯವನ್ನೂ ಅವರು ವ್ಯಕ್ತಪಡಿಸಿದ್ದಾರೆ.

–ಟಿಪ್ಸ್




ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಮೈಸೂರು ಖಾಯಂ ಮನೆ ವಿಳಾಸ ನಂ.8949, ವಿಜಯನಗರ 4ನೇ ಸ್ಟೇಜ್, ಎಸ್.ಆರ್.ಎಸ್. ಗೇಟ್ ಹತ್ತಿರ, ಯಶಸ್ವಿನಿ ಕಲ್ಯಾಣಮಂಟಪದ ಹತ್ತಿರ, ಹುಣಸೂರು ರಸ್ತೆ, ಹೂಟಗಳ್ಳಿ, ಮೈಸೂರು–18.

ಬೆಂಗಳೂರು ಮೈಸೂರು 9880444450

